ಶ್ರೀ ಧರ್ಮಸಿಂಗ್.—ಇವರಿಂದ ಅರ್ಜಿ ಕೂಡ ಯಾವುದೂ ಬಂದಿಲ್ಲ. ನಿವೇಶನವನ್ನೂ ಕೊಟ್ಟಿಲ್ಲ

ಶ್ರೀ ಎಂ. ಎಸ್. ಆತ್ಮಾನಂದ.—ಬಂದರೆ ಸಹಾನುಭೂತಿಯಿಂದ ಪರಿಶೀಲಿಸುತ್ತೀರಾ?

ಶ್ರೀ ಧರ್ಮಸಿಂಗ್.—ಬಂದಮೇಲೆ ನೋಡೋಣ. ಇದುವರೆಗೂ ಕಾರ್ಪೊರೇಷನ್ ಲ್ಯಾಂಡ್ ಯಾವುದೂ ಗುತ್ತಿಗೆಗೆ ಕೊಟ್ಟಿಲ್ಲ. ಆ ಬಗ್ಗೆ ವಿಚಾರ ಕೂಡ ಮಾಡುತ್ತಿಲ್ಲ. ಏತಕ್ಕೆಂದರೆ ಆ ರೀತಿ ಕೊಡುವುದನ್ನು ನಿಲ್ಲಿಸಿದ್ದೇವೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು ಮುಗಿದವು,

QUESTIONS FOR ANSWERS ON THE DAY

(but not taken up)

Construction of Bus Stand Building at Arasikere

85 SRI D.B. GANGADHARAPPA (Arasikere).—Will the Minister for Transport and Minor Irrigation be pleased to state:—

(a) whether it is a fact that the present Chief Minister the then Transport Minister laid the foundation stone of Arasikere Bus Stand Building and assured that the construction work will be completed within three months;

(b) if so, the reason for not starting the construction till now?

SRI M. M. J. SADYOJATHA (Minister for Transport and Minor Irrigation):—

(a) It is fact that the present Chief Minister who was then Transport Minister laid the foundation stone for Arasikere Bus Stand Building but no assurance regarding completion of the building within three months was given.

(b) An estimate for construction of permanent Bus Station at Arasikere at a cost of Rs. 8.00 lakhs has been administratively approved. Tenders have been invited for the work of providing covered accommodation and hardening the area. Work will be taken up as early as possible after following the formalities.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಗಲಭೆಗೆ ಸಂಬಂಧಪಟ್ಟಂತೆ ನಿಲುವಳಿ ಸೂಚನೆ ಕಳುಹಿಸಿ ಕೊಟ್ಟಿದ್ದೇನೆ. ದಯವಿಟ್ಟು ಅದನ್ನು ಮಂಡಿಸುವುದಕ್ಕೆ ತಾವು ಅನುಮತಿ ಕೊಡಬೇಕಾಗಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಮೈಕೇಲ್ ಫರ್ನಾಂಡಿಸ್.—ನಾನೂ ಕೂಡ ಒಂದು ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಅದನ್ನು ಆಮೇಲೆ ನೋಡೋಣ.